<u>ದಿನಾಂಕಃ**07-11-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ **3** ನೇ ಎದುರುದಾರರ ಪರ ಜೆ ಪಿ ಎಲ್ ವಕೀಲರ ಪರವಾಗಿ ಶ್ರೀಮತಿ ಎಸ್ ಬಿ ವಕೀಲರಿಂದಃ</u>

ದಿನಾಂಕ 26.02.2024 ರಂದು ಬಸ್ಸು ಆ ದಿನ ಕಾರ್ಕಳದಿಂದ ಕೊಪ್ಪಕ್ಕೆ ಬರುತ್ತಿತ್ತು. ನಾನು ಆ ದಿನ ಪ್ರಯಾಣಿಸುತ್ತಿದ್ದ ಬಸ್ ಸಂಖ್ಯೆ ನೆನೆಪಿರುವುದಿಲ್ಲ. ಆ ದಿನ ನಾನು ಕಾರ್ಕಳದಿಂದ ಬಸ್ಸಿನಲ್ಲಿ ಬಂದಿರುತ್ತೇನೆ. ಕೆಎ- 18-ಸಿ-1132 ಲಾರಿ ಯಾವ ಕಡೆಯಿಂದ ಯಾವ ಕಡೆಗೆ ಬರುತ್ತಿತ್ತು ಎಂದರೆ ಸಾಕ್ಷಿ ನಮ್ಮ ಬಸ್ಸಿನ ಎದುರುಗಡೆ ಬರುತ್ತಿತ್ತು ಎಂದು ಉತ್ತರಿಸುತ್ತಾರೆ. ನಾನು ಆ ದಿನ ಬಸ್ಸಿನ ಚಾಲಕನ ಹಿಂಬದಿಯ ಸೀಟಿನಲ್ಲಿ ಕುಳಿತುಕೊಂಡಿದ್ದೆ. ಸದರಿ ನಾನು ಕುಳಿತಿದ್ದ ಸೀಟು ಬಸ್ಸಿನ ಮಧ್ಯ ಭಾಗದಲ್ಲಿ ಬರುತ್ತಿತ್ತು ಎಂದರೆ ಸರಿ. ನಾನು ಬಸ್ಸಿನ ಮಧ್ಯದಲ್ಲಿ ಕುಳಿತ ಕಾರಣ ಬಸ್ಸಿನ ಮುಂದೆ ಬರುವ ವಾಹನಗಳ ಬಗ್ಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ನಾವು ಬರುತ್ತಿದ್ದ ರಸ್ತೆ ತಿರುವುಗಳಿಂದ ಕೂಡಿತ್ತು ಎಂದರೆ ಸರಿ. ಸದರಿ ಅಪಘಾತ ಬಸ್ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

2. ಅಪಘಾತ ಆದ ನಂತರ ನಾನು ಶೃಂಗೇರಿ ಸರ್ಕಾರಿ ಆಸ್ಪತ್ರೆ ಚಿಕಿತ್ಸೆ ಪಡೆದು ನಂತರ ನಾನು ಕೊಪ್ಪದ ಆದರ್ಶ ಆಸ್ಪತ್ರೆ ಹೋಗಿರುತ್ತೇನೆ. ಅಪಘಾತದ ಬಗ್ಗೆ ನಾನು ಶೃಂಗೇರಿ ಸರ್ಕಾರ ಆಸ್ಪತ್ರೆ ವೈದ್ಯರಿಗೆ ಹೇಳಿರುತ್ತೇನೆ. ಆ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಪಘಾತ ಆದಾಗ ನನಗೆ 65 ವರ್ಷಕ್ಕಿಂತ ಹೆಚ್ಚಿನ ವಯಸ್ಸು ಆಗಿತ್ತು ಎಂದರೆ ಸಾಕ್ಷಿ ಅವಾಗ ನನಗೆ 63 ನೇ ವರ್ಷ ಎಂದು ಉತ್ತರಿಸುತ್ತಾರೆ. ನಾನು ಯಾವ ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದೆ ಎಂದು ಹೇಳಲಾಗುತ್ತದೆ ಸಾಕ್ಷಿ ಮುಂದುವರೆದು ಕೊಪ್ಪಾದ ಆದರ್ಶ ಆಸ್ಪತ್ರೆಯಲ್ಲಿ ಮೂರು ದಿನ ಒಳರೋಗಿಯಾಗಿ ಇದ್ದೆ ಎಂದು ಉತ್ತರಿಸುತ್ತಾರೆ. ನನ್ನ ಹಲ್ಲುಗಳು ಹೋಗಿದ್ದು ಅವುಗಳನ್ನು ಜೋಡಣೆ ಮಾಡಿರುತ್ತಾರೆ ಮತ್ತು ನನ್ನ ಮುಖಕ್ಕೆ ಗಾಯ ಆಗಿರುತ್ತದೆ. ನಾನು 2 ಲಕ್ಷ ರೂಗಳನ್ನು ವೆಸ್ಟ್ ಮುಂಬಯಿ ಮುಲ್ಲುಂದ ಆಸ್ಪತ್ರೆಯಲ್ಲಿ ಖರ್ಚು ಮಾಡಿದ ಸಂಬಂಧ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.ನಾನು 2 ಲಕ್ಷ ಹಣ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಅಪಘಾತ ಆಗುವ ಕಾಲಕ್ಕೆ ನಾನು ಹೊಟೇಲ್ ನಲ್ಲಿ ಮ್ಯಾನೇಜರ್ ಅಗಿದ್ದೆನು. ಆ ಸಂಬಂಧ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನಗೆ ಮಾಸಿಕ ರೂ.30,000/- ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತ ಆಗುವ ಕಾಲಕ್ಕೆ ಯಾವುದೇ ಕೆಲಸ ಮಾಡದೇ ಇದ್ದರು ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿನಾಂಕ 26.02.2024 ರಂದು ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆ ಎಂಬ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಬಸ್ ಚಾಲಕನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಸ್ ನಿಧಾನವಾಗಿ ಚಲಿಸುತ್ತಿತ್ತು ಎಂದು ಉತ್ತರಿಸುತ್ತಾರೆ. ಬಸ್ ಚಾಲಕನ ತಪ್ಪಿನಿಂದ ಅಪಘಾತ ಆದ ಕಾರಣ 3 ನೇ ಎದುರುದಾರರು

ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಯಾವುದೇ ಶಾಶ್ವತ ಅಂಗನ್ಯೂನ್ಯತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **6** ನೇ ಎದುರುದಾರರ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>

ಆ ದಿನ ನಾನ ಪ್ರಯಾಣಿಸುತ್ತಿದ್ದ ಬಸ್ಸು ನಿಧಾನವಾಗಿ ಜಾಗೂರುಕತೆಯಿಂದ ಚಾಲಕನು ಬಸ್ಸನು ಚಲಾಯಿಸುತ್ತಿದ್ದ ಎಂದರೆ ಸರಿ. ಆ ದಿನ ಲಾರಿ ಚಾಲಕನ ತಪ್ಪಿನಿಂದ ಅಪಘಾತ ಆಗಿದ್ದು ಬಸ್ ಚಾಲಕನ ತಪ್ಪಿರುವುದಿಲ್ಲ ಎಂದರೆ ಸರಿ.

<u>ಪಾಟೀ ಸವಾಲುಃ **2** ನೇ ಎದುರುದಾರರ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ</u>

ಲಾರಿ ಚಾಲಕನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರ ಲಾರಿಗೆ ವಿಮೇ ಮಾಡಿಸಿದ್ದರು ಎಂದರೆ ಸರಿ. ನಾನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರ ಸಂಚಾರಿ ನಿಯಮಗಳನ್ನು ಪಾಲಿಸಿಕೊಂಡು ಲಾರಿಯನ್ನು ಚಲಾಯಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ